ಭಾರತದ ಚೆಸ್ ಬಾನಿನಲ್ಲಿ ಹೊಸ ತಾರೆಯೊಂದು ಮೂಡಿದೆ. ಇಷ್ಟು ಹೇಳಿದರೆ, ಅದು ಡಿ. ಗುಕೇಶ್ ಸಾಧನೆಗೆ ಚೌಕಟ್ಟು ಹಾಕಿದಂತೆ. ಅವರೀಗ, ವಿಶ್ವ ಚೆಸ್‌ನ ನಕ್ಷತ್ರ. ವಿಶ್ವ ಚಾಂಪಿಯನ್ ಆಗುವತ್ತ ದಿಟ್ಟ ಹೆಜ್ಜೆ ಇಟ್ಟಿರುವ, ಹದಿನೆಂಟರ ಹೊಸ್ತಿಲಲ್ಲಿರುವ ಕನಸುಕಂಗಳ ಜಾಣ.

ಟೊರಾಂಟೊದ ಹೃದಯಭಾಗದ ಗ್ರೇಟ್‌ಹಾಲ್‌ನಲ್ಲಿ ಏಪ್ರಿಲ್ 3ರಂದು 'ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ' ಆರಂಭವಾದಾಗ ಭಾರತದ ಮೂವರು– ಪ್ರಜ್ಞಾನಂದ ರಮೇಶಬಾಬು, ವಿದಿತ್ ಎಸ್. ಗುಜರಾತಿ ಮತ್ತು ದೊಮ್ಮರಾಜು ಗುಕೇಶ್– ಸ್ಥಾನ ಪಡೆದಿದ್ದರು. ಭಾರತದ ಮಟ್ಟಿಗೆ ಅದೊಂದು ದೊಡ್ಡ ಸಾಧನೆ. ಆದರೆ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಭಾರತದ ಆಟಗಾರರಿಗೆ ಪ್ರಶಸ್ತಿ ಗೆಲ್ಲುವ ಅವಕಾಶ ಇಲ್ಲ ಎಂದು ಸ್ಪಷ್ಟವಾಗಿ ಅಂದಾಜು ಮಾಡಿದ್ದರು. ನಾರ್ವೆಯ ಕಾರ್ಲ್‌ಸನ್ ಮಾತ್ರವಲ್ಲ, ಐದು ಸಲದ ವಿಶ್ವ ಚಾಂಪಿಯನ್, ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರೂ ತಮ್ಮ ದೇಶದ ಆಟಗಾರರಲ್ಲಿ ಯಾರನ್ನೂ ಫೇವರೆಟ್ ಎಂದು ಗುರುತಿಸಿರಲಿಲ್ಲ.

ಕಾರ್ಲ್‌ಸನ್ ಹಾಗೂ ಆನಂದ್‌ರ ಲೆಕ್ಕಾಚಾರಕ್ಕೆ ಕಾರಣವೂ ಇತ್ತು. ವಿಶ್ವದ ಎರಡನೇ ಕ್ರಮಾಂಕದ ಫ್ಯಾಬಿಯಾನೊ ಕರುವಾನಾ, ಮೂರನೇ ಕ್ರಮಾಂಕದ ಹಿಕಾರು ನಕಾಮುರಾ, ಎರಡು ಸಲದ ಚಾಂಪಿಯನ್ ಇಯಾನ್ ನೆಪೊಮ್‌ನಿಷಿ, ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅಂಥ ಘಟಾನುಘಟಿ ಆಟಗಾರರು ಟೂರ್ನಿಯ ಕಣದಲ್ಲಿದ್ದರು. ವಿವಿಧ ಮಾನದಂಡಗಳ ಆಧಾರದಲ್ಲಿ ಇಲ್ಲಿಗೆ ಬಂದ ಈ ಚದುರಂಗದ ಚದುರರು, ಅನುಭವದಲ್ಲೂ, ರೇಟಿಂಗ್‌ನಲ್ಲೂ ಭಾರತದ ಆಟಗಾರರಿಗಿಂತಲೂ ಸಾಕಷ್ಟು ಮುಂದೆಯಿದ್ದವರು. ನಕಾಮುರಾ ಹಾಗೂ ಕರುವಾನಾ ಅವರ ವಿಶ್ವ ಚಾಂಪಿಯನ್ ಕನಸಿಗೆ ಈ ಬಾರಿಯ ಕ್ಯಾಂಡಿಡೇಟ್ಸ್ ಅತ್ಯುತ್ತಮ ವೇದಿಕೆಯಾಗಿತ್ತು. ಮ್ಯಾಗ್ನಸ್ ಕಾರ್ಲ್‌ಸನ್ ಕಣದಲ್ಲಿ ಇಲ್ಲದಿರುವುದು ಕೂಡ ಇಬ್ಬರ ಕನಸಿಗೆ ನೀರೆರೆಯುವಂತಿತ್ತು. ಈ ಆಟಗಾರರು ಶಾಸ್ತ್ರೀಯ ಚೆಸ್‌ನಲ್ಲಿ ಹೆಚ್ಚು ಪಳಗಿದವರೂ ಆಗಿದ್ದರು. ಈ ಬಾರಿಯಾದರೂ ವಿಶ್ವ ಚಾಂಪಿಯನ್ ಪಟ್ಟ ಕರುವಾನಾ ಅಥವಾ ನಕಾಮುರಾ – ಇಬ್ಬರಲ್ಲೊಬ್ಬರಿಗೆ ದಕ್ಕಲಿ ಎನ್ನುವುದು ಕಾರ್ಲ್‌ಸನ್ ಸೇರಿದಂತೆ ವಿಶ್ವದ ಬಹುತೇಕ ಚೆಸ್‌ಪ್ರಿಯರ ಹಾರೈಕೆ ಹಾಗೂ ಹಂಬಲವಾಗಿತ್ತು. ಸಾಲದ್ದಕ್ಕೆ ಭಾರತೀಯ ಆಟಗಾರರಿಗೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಇದು ಮೊದಲ ಪ್ರಯತ್ನವೂ ಆಗಿತ್ತು. ವಿದಿತ್ ಅವರನ್ನು ಹೊರತುಪಡಿಸಿದರೆ ಉಳಿದಿಬ್ಬರು ಆಟಗಾರರು ಇಪ್ಪತ್ತನೇ ವಯಸ್ಸಿನ ಗಡಿಯನ್ನೂ ದಾಟಿರಲಿಲ್ಲ. ಪ್ರತಿಭೆಯ ಜೊತೆಗೆ ಅನುಭವವೂ ಪ್ರಮುಖ ಪಾತ್ರ ವಹಿಸುವ ಚೆಸ್‌ನಲ್ಲಿ ಅನುಭವಿ ಆಟಗಾರರು ಅಚ್ಚರಿಯ ಫಲಿತಾಂಶ ನೀಡುವ ನಿರೀಕ್ಷೆ ಚದುರಂಗದ ಜಾದೂ ಕರಗತ ಮಾಡಿಕೊಂಡ ಯಾರಿಗೂ ಇರಲಿಲ್ಲ.

ಆದರೆ, ಭಾರತೀಯರಿಗೆ ಒಂದು ಭರವಸೆಯಂತೂ ಇಲ್ಲ; ಈ ಹುಡುಗರು ಏನಾದರೂ ಮೋಡಿ ಮಾಡಿಯಾರೆನ್ನುವ ಆಶಾಕಿರಣ ಇದ್ದೇ ಇತ್ತು. ಈ ನಿರೀಕ್ಷೆಗೆ ಕಾರಣಗಳೂ ಇದ್ದವು. ಕಳೆದ ವರ್ಷ ವಿಶ್ವಕಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ್ದ, ಎರಡನೇ ಸ್ಥಾನ ಪಡೆದಿದ್ದ ಆರ್. ಪ್ರಜ್ಞಾನಂದ ಫೈನಲ್‌ನಲ್ಲಿ ಕಾರ್ಲ್‌ಸನ್‌ಗೆ ಎದುರಾಗುವ ಮೊದಲು, ಘಟಾನುಘಟಿಗಳನ್ನು ಮಣಿಸಿದ್ದರು. ಗುಕೇಶ್






ಮಗನ ಸಾಧನೆಗೆ
ಅಮ್ಮನ ಪ್ರೀತಿಯ
ಅಪ್ಪುಗೆ